ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

SE(ST+ 9M18)

(8)

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ಕವಿಪ್ರನಿನಿ/ಎಸ್‌ಎ8/ಬಿ7/2374/2008-09**
**ಲಗತ್ತು: ಅನುಬಂಧ-4 ಸಂಖ್ಯೆಗಳು**

ದಿನಾಂಕ 27 OCT 2022

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿ Elephant Habitat ಮತ್ತು Elephant Corridor ಗಳಲ್ಲಿರುವ ವಿದ್ಯುತ್ ಪ್ರಸರಣ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ರವರ ಪತ್ರ ಸಂಖ್ಯೆ 406/ವಿಎಸ್‌ಸಿ-ಇಎಂಸಿ ದಿನಾಂಕ 04.12.2019
2. ಕವಿಪ್ರನಿನಿ/ಎಸ್‌ಎ8/ಬಿ7/2374/2008-09 ದಿನಾಂಕ 30.12.2019
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪತ್ರ ಸಂಖ್ಯೆ ಪ್ರ.ಮು.ಅ.ಸಂ(ವಜೀ)/ಸ2/ಸಿ.ಅರ್-11/2017-18 ದಿನಾಂಕ 04.09.2020
4. ಕವಿಪ್ರನಿನಿ/ಬಿ19/10400/2020-21 ದಿನಾಂಕ 09.09.2020
5. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯ ಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ರವರ ಪತ್ರ ಸಂಖ್ಯೆ ಪ್ರಮುಅಸಂ(ವಜೀ)/ಸಿ2/ಸಿಆರ್-11/2017-18 ದಿನಾಂಕ 21.10.2020
6. ಕವಿಪ್ರನಿನಿ/ಬಿ19/10400/2020-21 ದಿನಾಂಕ 27.10.2020
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ ಎನರ್ಜಿ531/ಇಇಬಿ/2020 ದಿನಾಂಕ 04.12.2020
8. ಕವಿಪ್ರನಿನಿ/ಎಸ್‌ಎ8/ಬಿ7/2374/2008-09 ದಿನಾಂಕ 16.01.2021
9. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪತ್ರ ಸಂಖ್ಯೆ ಪ್ರಮುಅಸಂ/ವಜೀ2/ಸಿ2 /ಸಿಆರ್-11/2017-18 ದಿನಾಂಕ 18.08.2022

* * * * *

AEES 28/10/22

**ಪೀಠಿಕೆ:**

1. ವಿದ್ಯುತ್ ಸ್ಪರ್ಶದಿಂದ ಆನೆಗಳು ಸಾಯುವುದನ್ನು ತಪ್ಪಿಸಲು ಕೇಂದ್ರ ಸರ್ಕಾರವು ರಚಿಸಿರುವ Task Force ರವರು ಆನೆ ಮತ್ತು ವನ್ಯಜೀವಿ ಪ್ರದೇಶಗಳ ಮೂಲಕ ಹಾದುಹೋಗುವ ವಿದ್ಯುತ್ ಮಾರ್ಗಗಳ ರಚನೆಯಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳ ಕುರಿತು ನೀಡಿರುವ ಶಿಫಾರಸ್ಸುಗಳನ್ನು ಅನುಸರಿಸಲು ಉಲ್ಲೇಖ (2) ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ (ಅನುಬಂಧ-1).

2. ಇತ್ತೀಚಿನ ದಿನಗಳಲ್ಲಿ ಕಾಡಂಚಿನ ಪ್ರದೇಶ / ಗ್ರಾಮಗಳಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ರಿಟ್ ಅರ್ಜಿ ಸಂಖ್ಯೆ 10429/2008 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 08.10.2013 ರಂದು ನೀಡಿರುವ ಆದೇಶದಂತೆ, ಕಾಡಾನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗುವ ಪ್ರಕರಣಗಳನ್ನು ತಡೆಗಟ್ಟು ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ಉಲ್ಲೇಖ (4) ಮತ್ತು (8) ರ ಪತ್ರಗಳಲ್ಲಿ ನಿರ್ದೇಶನ ನೀಡಲಾಗಿದೆ (ಅನುಬಂಧ-2).

3. ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಮೃತಪಡುತ್ತಿರುವ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಡಾನೆಗಳನ್ನು Elephant Habitat ಮತ್ತು Elephant Corridor ಗಳಲ್ಲಿರುವ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ವಲಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು, ವಿದ್ಯುತ್ ಪ್ರಸರಣ ಮಾರ್ಗಗಳ ಕಾರಿಡಾರ್‌ನಿಂದಾಗಿ ಕಾಡಾನೆಗಳಿಗೆ ಯಾವುದೇ ರೀತಿಯ ಅಪಾಯವಾಗದಿರುವ ಬಗ್ಗೆ, ಆನೆಗಳ ಚಲನ–ವಲನ ಪ್ರದೇಶಗಳಲ್ಲಿ ಅಗತ್ಯ ಪರಿಹಾರ, ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಉಲ್ಲೇಖ (6) ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ (ಅನುಬಂಧ–3).

4. ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಸಾವಿಗೀಡಾಗುತ್ತಿರುವ ಪ್ರಕರಣಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ಕಾಡಾನೆಗಳನ್ನು Elephant Habitat ಮತ್ತು Elephant Corridor ಗಳಲ್ಲಿನ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ವಿದ್ಯುತ್ ಸ್ಥಾವರಗಳು, ವಿದ್ಯುತ್ ಮಾರ್ಗಗಳು, ತೋಟ ಮತ್ತು ಎಸ್ಟೇಟ್‌ಗಳ ಸುತ್ತ ಅಳವಡಿಸಿರುವ ಬೇಲಿಗಳಿಂದ ಕಾಡಾನೆಗಳಿಗೆ ಯವುದೇ ರೀತಿಯ ಅಪಾಯವಾಗದಿರುವ ಬಗ್ಗೆ ಮತ್ತು ಕಾನೂನುಬಾಹಿರವಾಗಿ ವಿದ್ಯುತ್ ಸಂಪರ್ಕ ಪಡೆದವರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಅನೆಗಳ ಚಲನ–ವಲನ ಪ್ರದೇಶಗಳಲ್ಲಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಹಾಗೂ ಸದರಿ ಪ್ರಕರಣಗಳನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಕೋರುತ್ತಾ, ಯಾವುದೇ ರೀತಿಯ ಅಹಿತಕರ ಘಟನೆಗಳು ಪುನರಾವರ್ತನೆಯಾದ ಸಂದರ್ಭದಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರಡಿಯಲ್ಲಿ ನಿಯಮಾನುಸಾರ ಅಗತ್ಯ ಕಾನೂನು ಕ್ರಮವನ್ನು ಸಂಬಂಧಿಸಿದ ಅಭಿಯಂತರರು/ಸಿಬ್ಬಂದಿಯವರ ವಿರುದ್ಧ ಕೈಗೊಳ್ಳಲಾಗುವುದೆಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯ ಭವನ, ಬೆಂಗಳೂರು ರವರು ಉಲ್ಲೇಖ (9) ರ ಪತ್ರದಲ್ಲಿ ಸೂಚಿಸಲಾಗಿದೆ (ಅನುಬಂಧ–4).

**ಆದೇಶ:**

ಉಲ್ಲೇಖದ ಸರ್ಕಾರದ ಪತ್ರಗಳನ್ವಯ ಈ ಕಛೇರಿಯ ಪತ್ರಗಳಲ್ಲಿ ನಿರ್ದೇಶಿಸಿರುವಂತೆ, ಮೇಲೆ ಹೇಳಿದ ಎಲ್ಲಾ ಅಂಶಗಳೊಂದಿಗೆ ಅರಣ್ಯ ಇಲಾಖೆಯ ಸಮನ್ವಯದೊಂದಿಗೆ Elephant Habitat ಮತ್ತು Elephant Corridor ಗಳನ್ನು ಗಮನದಲ್ಲಿರಿಸಿಕೊಂಡು ವಿದ್ಯುತ್ ಪ್ರಸರಣ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಕಡ್ಡಾಯವಾಗಿ ಅಳವಡಿಸುವಂತೆ ಸೂಚಿಸಲಾಗಿದೆ.

B R Malhotra

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು**

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ) / (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಾಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂ.ಐ.ಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ಸದರಿ ಸುತ್ತೋಲೆಯನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) / ಸಿವಿಲ್, ಕವಿಪ್ರನಿನಿ.
8. ಎಲ್ಲಾ ಉಪ ಲೆಕ್ಕ ನಿಯಂತ್ರಾಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

(71)

FILE No. ENERGY/819/VSC/2020-EMC-ENERGY SECRETARIAT

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
2ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ : 26-09-2020

**ಜರೂರು**

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ವ್ಯವಸ್ಥಾಪಕ ನಿರ್ದೇಶಕರು,
ಕೆ.ಪಿ.ಟಿ.ಸಿ.ಎಲ್/ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ

ಮಾನ್ಯರೆ,

ವಿಷಯ: ರಾಜ್ಯದಲ್ಲಿ Elephant habitat ಮತ್ತು Elephant Corridor ಗಳಲ್ಲಿರುವ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸುವ ಬಗ್ಗೆ

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಅಪಜೀ/158/ಎಫ್.ಡಬ್ಲ್ಯೂ.ಎಲ್/2020, ದಿನಾಂಕ: 21-09-2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರಿಂದ ಸ್ವೀಕೃತವಾಗಿರುವ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ

ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಏಷ್ಯಾಟಿಕ್ ಆನೆಗಳು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಅನುಸೂಚಿ-1 ರನ್ವಯ ಸಂರಕ್ಷಿಸಲ್ಪಡುವ ವನ್ಯಜೀವಿಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ಕಾಡಾನೆಗಳು ಕಾಡಂಚಿನ ಪ್ರದೇಶ/ಗ್ರಾಮಗಳಲ್ಲಿ ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 14029/2008 ರ ಪ್ರಕರಣದಲ್ಲಿ ಈ ಕೆಳಕಂಡ ಆದೇಶವನ್ನು ನೀಡಿರುತ್ತದೆ.

> **"…..IX. The State is directed to issue necessary directives to various electricity supply agencies and institutions in the State so as to raise and maintain the height of high tension and low tension power lines above the ground level, so as to make it safer for the elephants in the elephant habitat and elephant corridor; The Chief Conservator of Forests (Wildlife) and Chief Wildlife Warden of the State shall monitor the steps taken in this regard;**
>
> **X. The State to issue directives to electricity supply agencies and institutions to ensure that fencing around plantations and estates would not be a threat to the life of the elephants by any electrical**

16/10/2020

ಈ ಕುರಿತು ದಿನಾಂಕ 04-09-2020 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರು ಸಹ ಕೆ.ಪಿ.ಟಿ.ಸಿ.ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪತ್ರ ಬರೆದು ಹಲವು ಅಂಶಗಳ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿರುತ್ತಾರೆ.

ಈ ಸಂಬಂಧ, ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಸಾವಿಗೀಡಾಗುತ್ತಿರುವ ಪ್ರಕರಣಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ, ಕಾಡಾನೆಗಳನ್ನು ಸಂರಕ್ಷಿಸಲು Elephant habitat ಮತ್ತು Elephant Corridor ಗಳಲ್ಲಿನ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ತಮ್ಮ ನಿಗಮ/ಕಂಪನಿ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ವಿದ್ಯುತ್ ಸ್ಥಾವರಗಳು, ವಿದ್ಯುತ್ ಮಾರ್ಗಗಳು, ತೋಟ ಮತ್ತು ಎಸ್ಟೇಟ್‌ಗಳ ಸುತ್ತ ಅಳವಡಿಸಿರುವ ಬೇಲಿಗಳಿಂದ ಕಾಡಾನೆಗಳಿಗೆ ಯಾವುದೇ ರೀತಿಯ ಅಪಾಯವಾಗದಿರುವ ಬಗ್ಗೆ ಮತ್ತು ಕಾನೂನುಬಾಹಿರವಾಗಿ ವಿದ್ಯುತ್ ಸಂಪರ್ಕ ಪಡೆದವರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಆನೆಗಳ ಚಲನ-ವಲನ ಪ್ರದೇಶಗಳಲ್ಲಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಮಾನ್ಯ ನ್ಯಾಯಾಲಯದ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರು ನೀಡಿರುವ ಎಲ್ಲಾ ನಿರ್ದೇಶನಗಳನ್ನು ಪಾಲಿಸಿ, ಅನುಸರಣಾ ವರದಿಯನ್ನು ಇಂಧನ ಇಲಾಖೆಗೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

26/9/2020

(ಎನ್. ಮಂಗಳಗೌರಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಹೊರಡಿಸಿದೆ

ದಿನಾಂಕ: 29/09/2020

29/09/2020.

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

(64)

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಎಸ್‌ಎ8/ಬಿ7/2374/08-09

ದಿನಾಂಕ : 16 JAN 2021

ಮುಖ್ಯ ಇಂಜಿನಿಯರ್ (ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು/ಮೈಸೂರು/ತುಮಕೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮಾನ್ಯರೆ.

**ವಿಷಯ:-** ರಾಜ್ಯದಲ್ಲಿ ಕಾಡಾನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗಿಡಾಗುವ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳುವ ಕುರಿತು.

**ಉಲ್ಲೇಖ:-**
1. ಕವಿಪ್ರನಿನಿ/ಎಸ್‌ಎ8/ಬಿ7/2374/08-09 ದಿನಾಂಕ 30/12/2019.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ ಎನರ್ಜಿ531/ ಇಇಬಿ/2020 ದಿನಾಂಕ 04/12/2020.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯ ಜೀವಿ) ರವರ ಪತ್ರಗಳು ದಿನಾಂಕ 04/09/2020 ಹಾಗೂ 21/10/2020.
4. ಕವಿಪ್ರನಿನಿ/ಬಿ19/10400/2020-21 ದಿನಾಂಕ 09/09/2020 ಹಾಗೂ 27/10/2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ಉಲ್ಲೇಖಿತ ಪತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡಾಂಚಿನ ಪ್ರದೇಶ/ ಗ್ರಾಮಗಳಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಸಾವಿಗಿಡಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು ರಿಟ್ ಅರ್ಜಿ ಸಂಖ್ಯೆ 10429/2008 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 08/10/2013 ರಂದು ನೀಡಿರುವ ಆದೇಶದಂತೆ ಕಾಡಾನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗಿಡಾಗುವ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ.

ಮಾನ್ಯ ನ್ಯಾಯಾಲಯವು ದಿನಾಂಕ 08/10/2013 ರಂದು ನೀಡಿರುವ ಆದೇಶದ ಉದ್ಧೃತ ಭಾಗವು ಈ ಕೆಳಕಂಡಂತಿದೆ.

> *"......IX. The State is directed to issue necessary directives to various electricity supply agencies and institutions in the State so as to raise and maintain the height of high tension and low tension power lines above the ground level, so as to make is safer for the elephant corridor: The Chief Conservator of Forests (wildlife) and Chief Wildlife Warden of the State shall monitor the steps taken in this regard:*
>
> *X. The State to issue directives to electricity supply agencies and institutions to ensure that fencing around plantations and estates would not be threat to the life of the elephants by any electrical installations, supply lines, theft of power or otherwise."*

ಈ ಸಂಬಂಧ, ಕೇಂದ್ರ ಸರ್ಕಾರವು ರಚಿಸಿರುವ Task Force ರವರು ಆನೆ ಮತ್ತು ವನ್ಯ ಜೀವಿ ಪ್ರದೇಶಗಳ ಮೂಲಕ ಹಾದುಹೋಗುವ ವಿದ್ಯುತ್ ಮಾರ್ಗಗಳ ರಚನೆಯಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳ ಬಗ್ಗೆ ನೀಡಿದ್ದ ಶಿಫಾರಸ್ಸುಗಳನ್ನು ಅನುಸರಣೆಗಾಗಿ ಉಲ್ಲೇಖ (1) ರಲ್ಲಿನ ಪತ್ರದಲ್ಲಿ ಸೂಚಿಸಲಾಗಿತ್ತು. ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯ ಜೀವಿ) ರವರು ಇದೇ ವಿಷಯವಾಗಿ ಬರೆದ ಉಲ್ಲೇಖ (3) ಪತ್ರಗಳನ್ನು ಈಗಾಗಲೆ ಉಲ್ಲೇಖ (4) ರ ಪತ್ರದಲ್ಲಿ ಅಗತ್ಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಮಾನ್ಯ ನ್ಯಾಯಾಲಯದ ದಿನಾಂಕ 08/10/2013 ರಲ್ಲಿ ನೀಡಿರುವ ಆದೇಶದಂತೆ ಹಾಗೂ ಉಲ್ಲೇಖ (3) ಮತ್ತು (4) ರಲ್ಲಿನ ನಿರ್ದೇಶನದಂತೆ, ತಮ್ಮ ವಲಯ ವ್ಯಾಪ್ತಿಯಲ್ಲಿ ಕಾಡಾನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗಿಡಾಗುವ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು ಕೂಡಲೆ ಕಳುಹಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ವಿಶ್ವಾಸಿ,

16/1/2021

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಪ್ರಸರಣ ವೃತ್ತ, ಕವಿಪ್ರನಿನಿ.
2. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು- ಸದರಿ ಪತ್ರವನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್‌ಎಸ್ ವಿಭಾಗಗಳು, ಕವಿಪ್ರನಿನಿ.

ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್ ಸೈಟ್:w.w.w.kptcl.com
ಇ-ಮೇಲ್:dgmtkptcl@rediffmail.com

62

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number(CIN):U40109KA1999SGC025521

ನಂ:B19/10400/20-21
ಲಗತ್ತು:

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560009.
ದಿನಾಂಕ: 27.10.2020.

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ಬಾಗಲಕೋಟೆ/ಕಲ್ಬುರ್ಗಿ/
ಮೈಸೂರು/ತುಮಕೂರು/ಹಾಸನ.

ಮಾನ್ಯರೆ,

ವಿಷಯ: ರಾಜ್ಯದಲ್ಲಿ Elephant habitat ಮತ್ತು Elephant Corridor ಗಳಲ್ಲಿರುವ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ ರವರ ಪತ್ರ ಸಂ: ಪ್ರಮುಅಸಂ(ವಜೀ)/ಸಿ2/ಸಿಆರ್-11/2017-18 ದಿ: 04.02.2020.
2. ಈ ಕಛೇರಿ ಪತ್ರ ಸಂಖ್ಯೆ: ಬಿ19/10400/20-21 ದಿ: 09.09.2020.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ ರವರ ಪತ್ರ ಸಂ: ಪ್ರಮುಅಸಂ(ವಜೀ)/ಸಿ2/ಸಿಆರ್-11/2017-18 ದಿ: 21.10.2020.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಛೇರಿ ಉಲ್ಲೇಖ ಪತ್ರ (1) ಅನ್ನು ಮುಂದುವರೆಸುತ್ತಾ, ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಮೃತಪಡುತ್ತಿರುವ ಪ್ರಕರಣಗಳು ಇತ್ತೀಚಿಗೆ ಹೆಚ್ಚುತ್ತಿರುವ ಸಂಬಂಧ, ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ 14029/2028 ಪ್ರಕರಣದಲ್ಲಿ ನೀಡಿರುವ ಆದೇಶ ಉಲ್ಲಂಘನೆಯಾಗುವ ಹಿನ್ನೆಲೆಯಲ್ಲಿ, ಇಂತಹ ಪ್ರಕರಣಗಳನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಹಾಗೂ ಯಾವುದೇ ಅಹಿತಕರ ಘಟನೆಗಳು ಪುನರಾವರ್ತನೆ ಸಂದರ್ಭದಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಅಡಿಯಲ್ಲಿ ನಿಯಾಮಾನುಸಾರ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ ರವರು ಉಲ್ಲೇಖ ಪತ್ರ (3) ರಲ್ಲಿ ತಿಳಿಸಿರುತ್ತಾರೆ.

ಉಲ್ಲೇಖ ಪತ್ರ (3)ರ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆಗಳು ಮೃತಪಡುತ್ತಿರುವ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಡಾನೆಗಳನ್ನು Elephant habitat ಮತ್ತು Elephant Corridor ಗಳಲ್ಲಿರುವ ವಿದ್ಯುತ್ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ತಮ್ಮ ವಲಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು ಮತ್ತು

ವಿದ್ಯುತ್ ಪ್ರಸರಣ ಮಾರ್ಗಗಳ ಕಾರಿಡಾರ್‌ನಿಂದಾಗಿ ಕಾಡಾನೆಗಳಿಗೆ ಯಾವುದೇ ರೀತಿಯ ಅಪಾಯವಾಗದಿರುವ ಬಗ್ಗೆ ಆನೆಗಳ ಚಲನ-ವಲನ ಪ್ರದೇಶಗಳಲ್ಲಿ ಅಗತ್ಯ ಪರಿಹಾರ, ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುವ ನಿಟ್ಟಿನಲ್ಲಿ ತಮ್ಮ ವೈಯಕ್ತಿಕ ಗಮನ ಹರಿಸಿ ನಿಗಮದ ನಿಯಮಾನುಸಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

27/10/2020

ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿ,

ನಿರ್ದೇಶಕರು (ಪ್ರಸರಣ) ರವರ ಕಾರ್ಯನಿರ್ವಾಹಕ ಸಹಾಯಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com
ಇಮೇಲ್ ಐಡಿ: dgmtkptcl@rediffmail.com

60

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

ಸಂಖ್ಯೆ: ಬಿ19/10400/20-21
ಲಗತ್ತು: 2 ಪತ್ರಗಳು

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು - 560 009.
ದಿನಾಂಕ:09.09.2020

**ಮುಖ್ಯಇಂಜಿನಿಯರ್ (ವಿ),**
**ಪ್ರಸರಣ ವಲಯ, ಕವಿಪ್ರನಿನಿ,**
**ಬೆಂಗಳೂರು/ಬಾಗಲಕೋಟೆ/ಕಲ್ಬುರ್ಗಿ/**
**ಮೈಸೂರು/ತುಮಕೂರು/ಹಾಸನ.**

ಮಾನ್ಯರೆ,

**ವಿಷಯ :** ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪುತ್ತಿರುವ ಕಾಡಾನೆಗಳ ಪ್ರಕರಣಗಳನ್ನು ತಡೆಯುವ ಬಗ್ಗೆ.

**ಉಲ್ಲೇಖ:**
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ಇವರು ಎಲ್ಲಾ ಎಸ್ಕಾಂಗಳಿಗೆ ಬರೆದಿರುವ ಪತ್ರ ಸಂಖ್ಯೆ:ಪ್ರಮುಅಸಂ(ವಜೀ)/ಸಿ2/ಸಿಆರ್-11/2017-18 ದಿನಾಂಕ:04.09.2020.
2. The Principal Chief Conservator of Forest (wild life) & Chief wild life warden ರವರ ಇ-ಮೇಲ್ ದಿನಾಂಕ: 04.09.2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ(1)ರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ಇವರು ವಿದ್ಯುತ್ ಸ್ಪರ್ಶದಿಂದ ಅರಣ್ಯದಂಚಿನ ಪ್ರದೇಶಗಳಲ್ಲಿ ವನ್ಯ ಪ್ರಾಣಿಗಳಿಗೆ ಉಂಟಾಗುವ ಹಾನಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಎಲ್ಲಾ ಅಗತ್ಯ ಕ್ರಮ ವಹಿಸುವಂತೆ ಹಾಗೂ ಯಾವುದೇ ಅಹಿತಕರ ಘಟನೆಗಳು ಪುನರಾವರ್ತನೆ ಸಂದರ್ಭದಲ್ಲಿ ವನ್ಯ ಜೀವಿ (ಸಂರಕ್ಷಣ) ಕಾಯ್ದೆ 1972 ರಡಿಯಲ್ಲಿ ಅಗತ್ಯ ಕಾನೂನು ಕ್ರಮವನ್ನು ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ರವರ ವಿರುದ್ದ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ಪತ್ರವು ಸ್ವಯಂವೇದ್ಯವಾಗಿದ್ದು, ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ, ನಿಗಮದ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

9/9/2020
ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂ:ಕವಿಪ್ರನಿನಿ:ಎಸ್‌ಎ8/ಬಿ7/2374/2008-09 ದಿನಾಂಕ : 30 DEC 2019

ಅಡಕ: ಒಂಭತ್ತು

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು/ತುಮಕೂರು/ಹಾಸನ/ಮೈಸೂರು/ಬಾಗಲಕೋಟೆ/ಕಲಬುರಗಿ.

ಮಾನ್ಯರೆ,

ವಿಷಯ: ಕೇಂದ್ರ ಸರ್ಕಾರವು ರಚಿಸಿರುವ Task Force ರವರು ಆನೆ ಮತ್ತು ವನ್ಯಜೀವಿ ಪ್ರದೇಶಗಳ ಮೂಲ ಹಾದುಹೋಗುವ ವಿದ್ಯುತ್ ಮಾರ್ಗಗಳ ರಚನೆಯಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳ ಕುರಿತು

ಉಲ್ಲೇಖ: 1. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ(ಹೆಸ್ಕಾಂ), ಹುಬ್ಬಳ್ಳಿ, ರವರಿಗೆ ಬರೆದ ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:12.05.2009.
2. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ರವರ ಪತ್ರ ಸಂಖ್ಯೆ: 406/ವಿಎಸ್‌ಸಿ-ಇ ಎಂಸಿ/ ದಿನಾಂಕ:04.12.2019.

* * * * *

ವಿದ್ಯುತ್ ಸ್ಪರ್ಶದಿಂದ ಆನೆಗಳು ಸಾಯುವುದನ್ನು ತಪ್ಪಿಸಲು ಕೇಂದ್ರ ಸರ್ಕಾರದ ಸುತ್ತೋಲೆಯ ಅನುಸಾರ ವಿದ್ಯುತ್ ಮಾರ್ಗಗಳನ್ನು ನಿರ್ವಹಣೆ ಮಾಡುವ ಕುರಿತು ಸದರಿ ವಿಷಯದಲ್ಲಿ ತಿಳಿಸಬಯಸುವುದೇನೆಂದರೆ, ಆನೆಗಳಿಗೆ ಹಾಗೂ ವನ್ಯಜೀವಿಗಳಿಗೆ ಆಗುವ ಅಪಘಾತಗಳು ಬಹುತೇಕ ಎಸ್ಕಾಂ ಗಳ ಆಡಳಿತ ವ್ಯಾಪ್ತಿಯಲ್ಲಿ ಜರುಗುವುದರಿಂದ, ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾಂಡೇಲಿ, ರವರು ಈ ಕಛೇರಿಗೆ ಬರೆದ ದಿನಾಂಕ:23.01.2009 ರ ಪತ್ರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ ಟಿ.ಎನ್.ಗೋವರ್ಧನ್ ತಿರುಮುಲ್ಪಾಡ್ ವಿರುದ್ಧ ಭಾರತ ಸರ್ಕಾರ ಪ್ರಕರಣದಲ್ಲಿ ನೀಡಿರುವ ಆದೇಶದ ಹಿನ್ನೆಲೆಯಲ್ಲಿ, ಅರಣ್ಯ ವನ್ಯಜೀವಿಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಅರಣ್ಯ ಪ್ರದೇಶಗಳನ್ನೊಳಗೊಂಡ ಹೆಸ್ಕಾಂ ನ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಉಲ್ಲೇಖ(1) ರ ಪತ್ರದಲ್ಲಿ ತಿಳಿಸಿದ್ದು, ಈ ಪತ್ರದ ಪ್ರತಿಯನ್ನು ಎಲ್ಲಾ ಪ್ರಸರಣ ವಲಯ ಮುಖ್ಯ ಇಂಜಿನಿಯರುಗಳಿಗೆ ಕಳುಹಿಸಿಕೊಡುತ್ತಾ, ಆಡಳಿತ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶಗಳಲ್ಲಿ ಇವುಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಸೂಚನೆಗಳನ್ನು ಕೆಳ ಅಧಿಕಾರಿಗಳಿಗೆ ನೀಡಬೇಕೆಂದೂ ಸಹ ನಿರ್ದೇಶನ ನೀಡಲಾಗಿತ್ತು.

ಪ್ರಸ್ತುತ, ಕೇಂದ್ರ ಸರ್ಕಾರವು ರಚಿಸಿರುವ Task Force ರವರು ಆನೆ ಮತ್ತು ವನ್ಯಜೀವಿ ಪ್ರದೇಶಗಳ ಮೂಲ ಹಾದುಹೋಗುವ ವಿದ್ಯುತ್ ಮಾರ್ಗಗಳ ರಚನೆಯಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳ ಕುರಿತು ನೀಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಸದರಿ ಶಿಫಾರಸ್ಸುಗಳನ್ನು ಲಗತ್ತಿಸಿ ಬರೆದ ಶ್ರೀ ಸಂಜಯ್ ಮೋಹನ್, ಮುಖ್ಯ ವನ್ಯಜೀವಿ ಪರಿಪಾಲಕರು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು, ರವರ ಪತ್ರ ಸಂಖ್ಯೆ:PCCF(WL)/D/CR-72/2018-19 ದಿನಾಂಕ:27.11.2019 ವನ್ನು ಸೂಕ್ತ ಕ್ರಮಕ್ಕಾಗಿ ಉಲ್ಲೇಖ(2) ರ ಪತ್ರದೊಂದಿಗೆ ಕಳುಹಿಸಿಕೊಡಲಾಗಿದೆ. ಈ ಮಾರ್ಗೋಪಾಯಗಳ ಬಗ್ಗೆ ನೀಡಿರುವ ಶೀಫಾರಸ್ಸುಗಳು ಈ ಕೆಳಗಿನಂತಿವೆ:

1. Immediate rectification of sagging transmission lines and cables in the protected areas.
2. Joint inspection of transmission lines passing through protected areas with Forest Department, at least thrice a year (once before and once after monsoon).
3. All electrical accidents occurring in and around Forest area involving human / animals should be investigated by Electrical Inspector.
4. Use of ABC (aerial bunched cables) or underground cables to prevent death of animals in the Forest areas due to electrocution by the distribution lines.

5. Laying of underground cables or aerial bunched cables of 33kV and below lines passing through protected areas (National Parks, Wildlife sanctuaries, conservation reserve), eco-sensitive zones around the protected areas.
6. RoW for transmission lines can be optimized keeping in view the corridor requirement for the future by adopting suitable alternative of multi circuit / or multi voltage lines.
7. The existing lines should be replaced retrospectively with insulated cable / or underground cables on priority basis.
8. A subcommittee consisting of one representative from CEA, DIG (FC) and DIG (WL) would examine RoW requirements in protected areas
9. Early planning and rigorous Environmental Impact Assessment are two principal requirements for reducing wildlife mortality, due to transmission lines.
10. Routing of transmission lines and shifting of transmission structures should be done collaboratively involving all the stake holders.
11. Line marker devices / bird reflectors should be used in sufficient number to deflect the birds to take alternate path to reduce bird collisions with earth wires.
12. Line markers should be as large as possible and spacing should be more than 5 to 10 Mtrs and they should be visible at night, as most bird collisions are said to occur at night.
13. There is a need to set up reinforced electric poles fitted with spikes to prevent elephants rubbing against them and lifting of sagging overhead power lines.

ಈ ಲಗತ್ತಿನಲ್ಲಿ, ಡಾ: ಪಶುಪಾಲ ರವಿ, ವಿಜ್ಞಾನಿ, ಪರಿಸರ, ಅರಣ್ಯ ಮತ್ತು ಹವಾಮಾನ ಮಂತ್ರಾಲಯ(ವನ್ಯಜೀವಿ), ಭಾರತ ಸರ್ಕಾರ, ನವದೆಹಲಿ, ಇವರ ಪತ್ರ ಸಂಖ್ಯೆ: F.No.6-104/2019 WL ದಿನಾಂಕ:29.08.2019 ರ ಪ್ರತಿಯನ್ನು ಕಳುಹಿಸಿಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ, ಮೇಲೆ ಹೇಳಿರುವ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ರವರ ದಿನಾಂಕ:04.12.2019 ರ ಪತ್ರ ಹಾಗೂ ಲಗತ್ತುಗಳನ್ನು ಈ ಪತ್ರದೊಂದಿಗೆ ತಮಗೆ ಕಳುಹಿಸಿಕೊಡುತ್ತಾ, ಸದರಿ ಶಿಫಾರಸ್ಸುಗಳನ್ನು ಗಮನದಲ್ಲಿಟ್ಟುಕೊಂಡು, ಅಗತ್ಯವಿದ್ದಲ್ಲಿ, ತಮ್ಮ ವ್ಯಾಪ್ತಿಯಲ್ಲಿ ಅನುಸರಿಸಬೇಕೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
ಸಹಿ/-

<u>ಮಾಹಿತಿಗಾಗಿ:</u>

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
2. ಅಧೀಕ್ಷಕ ಇಂಜಿನಿಯರ್(ಕಾಮಗಾರಿ), ಕವಿಪ್ರನಿನಿ, ಬೆಂಗಳೂರು.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ವಿಭಾಗ/ಟಿ.ಎಲ್ ಅಂಡ್ ಎಸ್.ಎಸ್ ವಿಭಾಗ, ಕವಿಪ್ರನಿನಿ.
4. ನಿರ್ದೇಶಕರು(ಪ್ರಸರಣ), ರವರ ಹಿರಿಯ ಆಪ್ತ ಕಾರ್ಯದರ್ಶಿ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್(ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
6. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕಾನೂನು), ಕವಿಪ್ರನಿನಿ, ಬೆಂಗಳೂರು.

27/12/19
ಉಪ-ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)